



ಪ್ರವಾಸಿಗರಿಗೆಂದೇ ಧೋರ್ಡೋನಲ್ಲಿ ವಿಶೇಷವಾಗಿ ರೂಪಿಸಲಾಗಿರುವ ಟೆಂಟ್‌ಗಳು

ಸಾಂಸ್ಕೃತಿಕ ಹಬ್ಬವಾಗಿ ಶುರುವಾದ ಈ ಉತ್ಸವ ವರ್ಷಗಳುರುಳಿದಂತೆ ನಾಲ್ಕು ತಿಂಗಳ ಹಬ್ಬವಾಗಿ ಮಾರ್ಪಟ್ಟು ಈಗ ಜಾಗತಿಕ ಹಬ್ಬವಾಗಿ ಹೆಸರುವಾಸಿಯಾಗಿದೆ. ಈ ಹಬ್ಬವನ್ನು ಕಚ್ ಉತ್ಸವ, ವೈಟ್ ಡೆಸರ್ಟ್ ಉತ್ಸವ ಎಂದು ಸಹ ಕರೆಯುತ್ತಾರೆ. ಈ ವರ್ಷದ ಹಬ್ಬವು 2025ರ ಅಕ್ಟೋಬರ್ 23ರಿಂದ 2026ರ ಮಾರ್ಚ್ 4ರವರೆಗೆ ನಡೆಯಿತು.

## ರಣ್ ಉತ್ಸವದ ಬಾಗಿಲು ಧೋರ್ಡೋ

ಪ್ರತಿ ವರ್ಷ ಈ ಹಬ್ಬವನ್ನು ಆಚರಿಸುವುದು ಕಚ್ ಜಿಲ್ಲೆಯ ಧೋರ್ಡೋ ಎಂಬ ಚಿಕ್ಕ ಗ್ರಾಮದಲ್ಲಿ. ಬರೀ 600 ಜನಸಂಖ್ಯೆ ಹೊಂದಿರುವ ಈ ಗ್ರಾಮವು ಅಲ್ಲಲ್ಲಿ ಹರಡಿಕೊಂಡಿರುವ 81 ಮನೆಗಳನ್ನು ಹೊಂದಿದ್ದು, ಅವೆಲ್ಲವೂ ಸಾಂಪ್ರದಾಯಿಕ ಭುಂಗಾ ಮನೆಗಳು. ಪರಿಸರಸ್ನೇಹಿ, ಭೂಕಂಪ ನಿರೋಧಕ, ಶಂಕುವಿನಾಕಾರದ ಚಾವಣಿಗಳೊಂದಿಗೆ ಮಣ್ಣಿನಿಂದ ನಿರ್ಮಿಸಲಾದ ಈ ಗುಡಿಸಲು ಮನೆಗಳೆಲ್ಲವೂ ಸೌರಶಕ್ತಿ ಹೊಂದಿರುವುದು ಈ ಗ್ರಾಮದ ವೈಶಿಷ್ಟ್ಯ. ಇಲ್ಲಿ ಪ್ರತಿವರ್ಷ ತಾತ್ಕಾಲಿಕವಾಗಿ ನಿರ್ಮಿಸಲಾಗುವ ಸೊಗಸಾದ ಟೆಂಟ್ ಸಿಟಿ ರೆಸಾರ್ಟ್‌ನಲ್ಲಿ ಈ ಉತ್ಸವವು ರಂಗೇರುತ್ತದೆ.

ಕಚ್ ಜಿಲ್ಲಾ ಕೇಂದ್ರವಾದ ಭುಜ್‌ನಿಂದ ಸುಮಾರು 80 ಕಿ.ಮೀ. ದೂರದ ಟೆಂಟ್ ಸಿಟಿಗೆ ಪ್ಯಾಕೇಜ್‌ನ ಭಾಗವಾಗಿ ಎಸಿ ಕೋಚ್‌ನಲ್ಲಿ ಸುಮಾರು ಒಂದೂಮುಕ್ಕಾಲು ಗಂಟೆಯಲ್ಲಿ ತಲುಪಿಸುತ್ತಾರೆ. ಇನ್ನೊಂದು ಪರ್ಯಾಯ ಮಾರ್ಗವೆಂದರೆ, ಅಹಮದಾಬಾದ್‌ನಿಂದ ಸುಮಾರು 400 ಕಿ.ಮೀ. ದೂರವಿರುವ ಟೆಂಟ್ ಸಿಟಿಯನ್ನು ರಸ್ತೆ ಮೂಲಕ ತಲುಪುವುದು. ಸುಮಾರು ಏಳು ಗಂಟೆಯ ಪಯಣವದು. ನಾವು ಆಯ್ದುಕೊಂಡದ್ದು ಇದೇ ಮಾರ್ಗವನ್ನು. ಬೆಂಗಳೂರಿನಿಂದ ವಿಮಾನದಲ್ಲಿ ಬೆಳಿಗ್ಗೆ 11 ಗಂಟೆಗೆ ಅಹಮದಾಬಾದ್‌ಗೆ ಬಂದಿಳಿದ ನಮ್ಮ ಕುಟುಂಬದ ಆರು ಜನರನ್ನು ಪ್ಯಾಕೇಜ್‌ನ ಭಾಗವಾಗಿ ವಿಮಾನ ನಿಲ್ದಾಣದಿಂದ ಅವರದೇ ವಾಹನದಲ್ಲಿ 7 ಗಂಟೆಗಳ ಪಯಣದ ನಂತರ ಸಂಜೆ 6.30 ಗಂಟೆಗೆ ಟೆಂಟ್ ಸಿಟಿ ತಲುಪಿಸಿ ನಮ್ಮ ನಮ್ಮ ಟೆಂಟ್‌ಗಳಿಗೆ ಕಳಿಸಿದರು. ಸಕಲ ಸೌಲಭ್ಯಗಳೊಂದಿಗೆ ಸುಸಜ್ಜಿತವಾಗಿದ್ದ ಮೂರು ಪ್ರೀಮಿಯಮ್ ಡೇರೆಗಳನ್ನು ಮುಂಚಿತವಾಗಿಯೇ ನಮಗಾಗಿ ಕಾಯ್ದಿರಿಸಲಾಗಿತ್ತು.

ಟೆಂಟ್ ಸಿಟಿಯನ್ನು ವಿಶಾಲವಾದ ಬಂಜರು ಭೂಮಿಯಲ್ಲಿ ನಿರ್ಮಿಸಲಾಗಿದೆ. ಸುಮಾರು ಐದು ಲಕ್ಷ ಚ.ಮೀ. ವಿಸ್ತೀರ್ಣದಲ್ಲಿ ಒಂಬತ್ತು ಕ್ಲಸ್ಟರ್‌ಗಳಲ್ಲಿ 350ಕ್ಕೂ ಹೆಚ್ಚು ವಿವಿಧ ದರ್ಜೆಯ ಐಷಾರಾಮಿ ಟೆಂಟ್‌ಗಳು ಇಲ್ಲಿವೆ. ಇಲ್ಲಿನ ವಾಸ್ತವ್ಯವು ಜೀವಮಾನದಲ್ಲಿಯೇ ಮರೆಯಲಾಗದ ಅನುಭವ ನೀಡುತ್ತದೆ. ಬಹಳ ವಿಶಾಲವಾಗಿರುವ ಈ ರೆಸಾರ್ಟ್‌ನಲ್ಲಿ ಒಂದು ಕಡೆಯಿಂದ ಇನ್ನೊಂದು ಕಡೆಗೆ ಕಾಲ್ನಡಿಗೆಯಲ್ಲಿ ತಿರುಗಾಡಲು ಸಾಧ್ಯವಿಲ್ಲದ್ದರಿಂದ ಗಾಲ್ಫ್ ಕಾರ್ಟ್ ವ್ಯವಸ್ಥೆ ಮಾಡಲಾಗಿದೆ. ಎರಡು ಊಟದ ಹಾಲ್‌ಗಳಿದ್ದು ಅತಿಥಿಗಳಿಗೆ ಬೆಳಗಿನ ತಿಂಡಿ, ಮಧ್ಯಾಹ್ನದ ಊಟ, ಸಾಯಂಕಾಲದ ಹೈ ಟೀ ಮತ್ತು ಸಂಜೆಯ ಊಟ ಕೊಡುತ್ತಾರೆ. ಬಫೆ ವ್ಯವಸ್ಥೆಯಿದೆ. ರುಚಿಕರವಾದ ವೈವಿಧ್ಯಮಯ ಸಸ್ಯಾಹಾರಿ ಊಟವನ್ನು ಒದಗಿಸುತ್ತಾರೆ. ಬಾಯಿ ನೀರೂರಿಸುವ ಸಾಕಷ್ಟು ಸ್ಥಳೀಯ ಕಚ್ಚಿ ಭಕ್ಷ್ಯಗಳು ಮತ್ತು ಖಂಡಾಂತರ ಭಕ್ಷ್ಯಗಳು ಸಹ ಇದರಲ್ಲಿ ಸೇರಿವೆ.



ರಣ್ ಉತ್ಸವದ ಹೆಬ್ಬಾಗಿಲು ಧೋರ್ಡೋ

ಪ್ರತಿದಿನ ಬೆಳಿಗ್ಗೆ ಯೋಗ ತರಗತಿಗಳು ನಡೆಯುತ್ತವೆ. ಸ್ವಾಸ್ಥ್ಯ ಕೇಂದ್ರದಲ್ಲಿ ಸ್ಪಾ ಸೇವೆ ಮತ್ತು ಸಾಂಪ್ರದಾಯಿಕ ಭಾರತೀಯ ಮಸಾಜ್ ವ್ಯವಸ್ಥೆಯಿದೆ. ಸದಾ ವೈದ್ಯಕೀಯ ಸೇವೆ ಲಭ್ಯವಿದೆ. ಹವಾನಿಯಂತ್ರಿತ ಸಮ್ಮೇಳನ ಸಭಾಂಗಣ ಮತ್ತು ಸ್ವಾಗತ ಕಮ್ ಮೀಟಿಂಗ್ ಪ್ರದೇಶಗಳಿವೆ. ಇಲ್ಲಿರುವ ಆರ್ಟ್ ಗ್ಯಾಲರಿ, ವಸ್ತುಸಂಗ್ರಹಾಲಯ ಮತ್ತು ಕರಕುಶಲ ಬಜಾರ್‌ನಲ್ಲಿ ಕಚ್ಚಿ ಕರಕುಶಲ ವಸ್ತುಗಳು, ಜವಳಿ ಮತ್ತು ಸಾಂಪ್ರದಾಯಿಕ ಕಲೆಗಳನ್ನು ಪ್ರದರ್ಶಿಸಲಾಗುತ್ತದೆ. ಸ್ಥಳೀಯ ಕಸೂತಿ, ಬಾಂಧ್ನಿ ದುಪಟ್ಟಾ, ಕೈಯಿಂದ ನೇಯ್ದ ಶಾಲು, ರೋಗನ್ ಕಲೆ ಮತ್ತು ಲೋಹದ ಕಲಾಕೃತಿ ಮುಂತಾದ ಹಲವಾರು ವಸ್ತುಗಳು ಇಲ್ಲಿ ಮಾರಾಟಕ್ಕೆ ಲಭ್ಯವಿರುತ್ತವೆ.

ಇಲ್ಲಿನ ವಾಸ್ತವ್ಯದಲ್ಲಿ ಬೆರಗುಗೊಳಿಸುವ ಸೂರ್ಯೋದಯ ಮತ್ತು ಸೂರ್ಯಾಸ್ತಗಳ ಸೊಬಗನ್ನು ಕಣ್ತುಂಬಿಕೊಳ್ಳುವ ಅವಕಾಶ ಲಭಿಸುತ್ತದೆ. ಬಾಡಿಗೆಗೆ ಸಿಗುವ ಸಾಂಪ್ರದಾಯಿಕ ಕಚ್ಚಿ ಉಡುಗೆಗಳನ್ನು ಧರಿಸಿ ಬಿಳಿ ರಣ್‌ನಲ್ಲಿ ಫೋಟೊ ಕ್ಲಿಕ್ಕಿಸಿಕೊಳ್ಳಬಹುದು. ಈ ಮರುಭೂಮಿಯು ಭಾರತದ ಪ್ರಸಿದ್ಧ ನಕ್ಷತ್ರ ವೀಕ್ಷಣಾ ತಾಣಗಳಲ್ಲಿ ಒಂದಾಗಿದೆ. ಸ್ಫಟಿಕ ಸ್ಪಷ್ಟ ರಾತ್ರಿಯಾಗಸದಲ್ಲಿ ನಡೆಯುವ ಈ ನಕ್ಷತ್ರ ವೀಕ್ಷಣೆ ಖಗೋಳಪ್ರಿಯರಿಗೆ ಮರೆಯಲಾಗದ ಅನುಭವ ನೀಡುತ್ತದೆ. ಫೋಟೊಪ್ರಿಯರಿಗೆ ಇಲ್ಲಿ ಹಬ್ಬದೂಟ. ಶ್ವೇತ ವರ್ಣದಲ್ಲಿ ಹೊಳೆಯುವ ಈ ಉಪ್ಪಿನ ಮರುಭೂಮಿಯಲ್ಲಿ ನಿಂತು, ಕುಳಿತು, ಕುಣಿದು, ವಿವಿಧ ಭಂಗಿಗಳಲ್ಲಿ ಫೋಟೊ ತೆಗೆಸಿಕೊಳ್ಳಲು ಪ್ರವಾಸಿಗರು ಮುಗಿಬೀಳುತ್ತಾರೆ. ಸಾಹಸಪ್ರಿಯರು ಬಿಸಿ ಗಾಳಿಯ ಬಲೂನಿಂಗ್, ಒಂಟೆ ಸವಾರಿ, ಒಂಟೆ ಗಾಡಿ ಸವಾರಿ, ರೋಪ್